## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ರಾಜರಾಜೇಶ್ವರಿನಗರ ವಲಯ ವ್ಯಾಪ್ತಿಯ ವಾರ್ಡ್–ಸಂಖ್ಯೆ 129,ರಲ್ಲಿ ದಿನಾಂಕ: 06.11.2021ರಂದು ನಡೆದ ವಾರ್ಡ್ ಸಮಿತಿ ಸಭೆಯ ಸಭಾ ನಡವಳಿಗಳು.**

ದಿನಾಂಕ:06.11.2021ರಂದು ವಾರ್ಡ್ ಸಂಖ್ಯೆ 129ರ ನವಂಬರ್ ಮಾಹೆಯ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್‌ಸಂಖ್ಯೆ:129ರ ವಾರ್ಡ್ ಕಛೇರಿಯು ನವೀಕರಣಗೊಳ್ಳುತ್ತಿರುವುದರಿಂದ ಹೆಲ್ತ್ ಬಡಾವಣೆಯಲ್ಲಿನ ಉದ್ಯಾನವನದಲ್ಲಿ ನಡೆಸಲಾಯಿತು. ಈ ಕೆಳಕಂಡಂತೆ ಸದಸ್ಯರು/ಸಾರ್ವಜನಿಕರು ಭಾಗವಹಿಸಿರುತ್ತಾರೆ.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:**

1. ಶ್ರೀ.ಜೆ.ವಿಶ್ವನಾಥ್, ಅಧೀಕ್ಷಕಅಭಿಯಂತರರು (ದಾಸರಹಳ್ಳಿ ವಲಯ) ಹಾಗೂ ವಾರ್ಡ್ 129 ನೋಡಲ್ ಅಧಿಕಾರಿಗಳು
2. ಮಾರ್ಷಲ್ ವಾರ್ಡ್–129
3. ಸಹಾಯಕಅಭಿಯಂತರರುಹಾಜರಾಗಿರುವದಿಲ್ಲ.
4. ಶ್ರೀ.ವಿಜಯ್, ಕಿರಿಯಆರೋಗ್ಯ ಪರಿವೀಕ್ಷಕರು ವಾರ್ಡ್–129'ಎ'ಹಾಜರಿರುತ್ತಾರೆ.
5. ಶ್ರೀಮತಿ.ಅನಿತಾ, ಕಿರಿಯಆರೋಗ್ಯ ಪರಿವೀಕ್ಷಕರು ವಾರ್ಡ್–129 'ಬಿ'ಹಾಜರಿರುತ್ತಾರೆ.
6. ಶ್ರೀ.ಜೈ ಕುಮಾರ್ ಹಿರಿಯಆರೋಗ್ಯ ಪರಿವೀಕ್ಷಕರು ವಾರ್ಡ್–129,
7. ಶ್ರೀ. ನಾಗೇಂದ್ರ, ವಾಸು ಸಿ ಗೌಡ, ಸಂಜಯ, ಮಧುಕರ್, ವೆಂಕಟಾಚಲ್ಯಯ್ಯಾ, ಪ್ರಕಾಶ, ಸೋನಿ ಶರ್ಮ ಹೆಲ್ತ್ ಬಡಾವಣೆಯ ನಿವಾಸಿಗಳು ಹಾಗರಿದ್ದರು,
8. ಶ್ರೀ. ರಾಮಣ್ಣ, ಎನ್.ಜಿ.ಇ.ಎಫ್ ಬಡಾವಣೆ ಮಲ್ಲತ್ತಹಳ್ಳಿ ವಾರ್ಡ್–129 ನಿವಾಸಿ
9. ಶ್ರೀ.ದತ್ತಾ, ಶ್ರೀ. ವೇಣುಗೋಪಾಲ್ಎನ್.ಜಿ.ಇ.ಎಫ್ ಬಡಾವಣೆಸ್ಥಳಿಯ ನಿವಾಸಿ, ವಾರ್ಡ್ –129
10. ಜೂಮ್‌ತಂತ್ರಾಂಶದಲಿ ಹೆಲ್ತ್ ಬಡಾವಣೆಯ ನಿವಾಸಿಶ್ರೀಮತಿ. ಸೋನಿ ಶರ್ಮನಿವಾಸಿ, ವಾರ್ಡ್ –129
11. ಶ್ರೀ. ಪಿ ಉಡುಪ, ರವರು ಹಾಜರಿದ್ದರು.

ಸದರಿವಾರ್ಡ್ ಸಮಿತಿ ಸಭೆಯನ್ನು ಹಾಜರಾಗಿದ್ದ ಎಲ್ಲಾ ಸದಸ್ಯರು ಹಾಗೂ ಅಧಿಕಾರಿಗಳನ್ನು ಸ್ವಾಗತಕೋರುತ್ತಾ, ಸಭೆಯನ್ನು ಪ್ರಾರಂಭಿಸಲಾಯಿತು.

ಸದರಿ ಸಭೆಯಲ್ಲಿ ಹೆಲ್ತ್ ಬಡಾವಣೆಯಲ್ಲಿ ಘನ ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ದಿನ ನಿತ್ಯ ಹಸೀ ತ್ಯಾಜ್ಯವನ್ನು ಸಂಗ್ರಹಿಸಲಾಗುತ್ತಿದ್ದು ಒಣ ತ್ಯಾಜ್ಯದ ಸಂಗ್ರಹಣೆಯು ಸಮರ್ಪಕವಾಗಿ ಆಗುತ್ತಿಲ್ಲದಿರುವ ಬಗ್ಗೆ ದೂರನ್ನು ಸಲ್ಲಿಸಿದ್ದು ತತ್ಸಂಬಂಧ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರು ಇದರ ಬಗ್ಗೆ ಕ್ರಮವಹಿಸಲಾಗುವುದಾಗಿ ಸಭೆಯಲ್ಲಿ ತಿಳಿಸಿರುತ್ತಾರೆ ಹಾಗೂ ಸದರಿ ಬಡಾವಣೆಯಲ್ಲಿ ಅಲಲ್ಲಿ ಉದ್ಭವವಾಗುತ್ತಿರುವ ಬ್ಲಾಕ್ ಸ್ಪಾಟ್‌ಅನ್ನುಕೂಡಲೇ ತೆರವುಗೊಳಿಸಬೇಕೆಂದು ಹಾಗೂ ಸದರಿ ಬಡಾವಣೆಯ ರಸ್ತೆಗಳಲ್ಲಿ ಸ್ಟ್ರೀಟ್ ಸ್ವೀಪಿಂಗ್‌ಆಗಬೇಕೆಂದು ಸ್ಥಳಿಯ ನಿವಾಸಿಗಳು ಕೋರಿಕೊಂಡಂತೆ ಕ್ರಮ ವಹಿಸಲಾಗುವುದೆಂದು ಕಿರಿಯ ಆರೋಗ್ಯ ಪರಿವೀಕ್ಷಕರು ಸಭೆಯಲ್ಲಿ ತಿಳೀಸಿರುತ್ತಾರ.

ಹೆಲ್ತ್ ಬಡಾವಣೆಯ ರಸ್ತೆಗಳಲ್ಲಿನ ಚರಂಡಿಗಳಲ್ಲಿ ಹೂಳು ತುಂಬಿಕೊಂಡಿದ್ದು ಮಳೆಯಾದಾಗ ನೀರ ಸರಾಗವಾಗಿ ಹರಿಯದೆ ಇರುವುದರಿಂದ ಸದರಿ ಚರಂಡಿಗಳಲ್ಲಿನ ಹೂಳನ್ನು ತೆಗಿಸಬೇಕೆಂದು ಹಾಜರಿದ್ದಎಲ್ಲಾ ನಿವಾಸಿಗಳು ಕೋರಿಕೊಂಡಿರುತ್ತಾರೆ . ಹಾಗೂ ಸದರಿ ಬಡಾವಣೆಯಲ್ಲಿನ ವಾಣಿಜ್ಯ ಅಂಗಡಿಗಳಲ್ಲಿ ಪ್ಲಾಸ್ಟಿಕ್ ನಿಷೇದವಾಗಿದ್ದರೂ ಸಹ ಪ್ಲಾಸ್ಟ್ ಚೀಲಗಳು ಬಳಕೆಯಾಗುತ್ತಿರುವ ಬಗ್ಗೆ ಪ್ಲಾಸ್ಟಿಕ್ ವಶಪಡಿಕೊಳ್ಳಬೇಕೆಂದು ಮತ್ತು ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಿಕೊಂಡಿರುವ ಬಗ್ಗೆ ತೆರವುಗೊಳಿಸಲು ಕ್ರಮವಹಿಸಬೇಕೆಂದು ಹಾಗೂ ಹೆಲ್ತ್ ಬಡಾವಣೆಯಲ್ಲಿ ಕೆಲವು ರಸ್ತೆಗಳಲ್ಲಿ ನಾಮಫಲಕವು ಇಲ್ಲದಿರುವುದರಿಂದ ನಾಮಫಲಕವನ್ನು ಅಳವಡಿಸಲು ಕ್ರಮವಹಿಸಬೇಕೆಂದು

ಕೋರಿರುತ್ತಾರೆ . ತತ್ಸಂಬಂಧ ಸದರಿ ವಿಚಾರವಾಗಿ ಕಾಮಗಾರಿ ಇಲಾಖೆ ಹಾಗೂ ಆರೋಗ್ಯ ಇಲಾಖೆರವರು ಜಂಟಿಯಾಗಿ ಡ್ರೈವ್ ನಡೆಸಬೇಕೆಂದು ಸಭೆಯಲ್ಲಿ ತಿಳಿಸಲಾಗಿರುತ್ತದೆ.

ಕ್ರಮ:

- ಸಹಾಯಕಅಭಿಯಂತರರು ವಾರ್ಡ್ -129,ಸದರಿ ಬಡಾವಣೆಯರಸ್ತೆಯಲ್ಲಿನ ಚರಂಡಿಗಳಲ್ಲಿ ತುಂಬಿರುವ ಹೂಳನ್ನು ತೆರವುಕೊಳಿಸಲು ಕ್ರಮ ವಹಿಸುವುದು ಹಾಗೂ ಹೆಲ್ತ್ ಬಡಾವಣೆಯಲ್ಲಿ ಕೆಲವು ರಸ್ತೆಗಳಲ್ಲಿ ನಾಮಫಲಕವು ಇಲ್ಲದಿರುವುದರಿಂದ ನಾಮಫಲಕವನ್ನು ಅಳವಡಿಸಲು ಅಗತ್ಯ ಕ್ರಮವಹಿಸುವುದು

- ಪಾದಚಾರಿ ಒತ್ತುವರಿಗೆ ಹಾಗೂ ಪ್ಲಾಸ್ಟಿಕ್ ಬಳಸುತ್ತಿರುವ ಬಗ್ಗೆ ಕಾಮಗಾರಿ ಇಲಾಖೆ ಮತ್ತು ಆರೋಗ್ಯ ಇಲಾಖೆಯವರು ಜಂಟಿಯಾಗಿ ಮುಖ್ಯರಸ್ತೆಗಳಲ್ಲಿ ಕ್ರಮ ವಹಿಸುವುದು.

ವಾರ್ಡ್‌ಸಂಖ್ಯೆ:129ರಲ್ಲಿ ಒಣತ್ಯಾಜ್ಯ ಸಂಗ್ರಹಣೆಕೇಂದ್ರಹಾಗೂ ಸದರಿ ಬಡಾವಣೆ ನಿವಾಸಿಗಳು ತ್ಯಾಜ್ಯದ ಸೆಕೆಂಡರಿ ಕಲೆಕ್ಷನ್ ಪಾಯಿಂಟ್‌ಅನ್ನು ಕೋರಿಕೊಂಡಿದ್ದು ತತ್ಸಂಬಂಧ ಸೆಕೆಂಡರಿ ಕಲೆಕ್ಷನ್ ಪಾಯಿಂಟ್ ಬದಲಾಯಿಸಲು ಬಿಬಿಎಂಪಿ ವತಿಯಿಂದ ಮಿನಿ **ಟ್ರಾನ್ಸ್ಫರ್ ಸ್ಟೇಷನ್** ನಿರ್ಮಿಸುವ ಸೌಲಭ್ಯವಿದ್ದು ಸದರಿ ಕಟ್ಟಡಕ್ಕೆ ಅವಶ್ಯವಿರುವಸ್ಥಳಾವಕಾಶ ಇಲ್ಲದಿರುವುದರಿಂದ ಸದರಿ ಬಡಾವಣೆಯಲ್ಲಿ ಸರ್ಕಾರಿ/ಬಿಬಿಎಂಪಿಗೆ ಸೇರಿದ ಸ್ಥಳವಿದ್ದರೆ ತಿಳಿಸಬೇಕೆಂದು ಕೋರಲಾಗಿರುತ್ತದೆ

ಶ್ರೀ ದಿನೇಶ್ ಗೌಡ ರೈಲ್ವೆ ಬಡವಾಣೆ ನಿವಾಸಿ ದೂರವಾಣಿ ಮುಖಾಂತರ ಕರೆ ಮಾಡಿ ಸದರಿ ಬಡವಾಣೆಯಲ್ಲಿರುವ ರಸ್ತೆಗಳು ತುಂಬ ಹಾಳಾಗಿದ್ದು ಸದರಿ ರಸ್ತೆಗಳನ್ನು ಕೂಡಲೆ ದುರಸ್ಥಿ ಪಡಿಸಲು ಕ್ರಮವಹಿಸಬೇಕೆಂದು ಕೋರಿರುತ್ತಾರೆ. ತತ್ಸಂಬಂಧ ಸ.ಕಾ.ನಿ.ಯ ರವರನ್ನು ದೂರವಾಣಿ ಮುಖಾಂತರ ಸಂಪರ್ಕಿಸಲು ಈಗಾಗಲೇ ಸದರಿ ಬಡಾವಣೆಯ ಕೆಲವು ರಸ್ತೆಗಳನ್ನು ಪ್ಯಾಕೇಜ್ ಅಡಿಯಲ್ಲಿ ದುರಸ್ಥಿ ಪಡಿಸಲು ಅನುಮೋದನೆಯಾಗಿರುವುದಾಗಿ ತಿಳಿಸಿದ್ದು ಪರಿಶೀಲಿಸಿ ವರದಿನೀಡುವುದಾಗಿ ತಿಳಿಸಿರುತ್ತಾರೆ

ಕ್ರಮ: ಸಹಾಯಕಅಭಿಯಂತರರು ವಾರ್ಡ್ -129,ಅಗತ್ಯ ಕ್ರಮಕ್ಕಾಗಿ

ಮೇಲ್ಕಂಡ ಎಲ್ಲಾ ಅಂಶಗಳ ಬಗ್ಗೆ ಸೂಚಿಸಿರುವ ಸಂಬಂಧ ಪಟ್ಟ ಅಧಿಕಾರಿಗಳು ಅಗತ್ಯ ಕ್ರಮವಹಿಸಿ ಕೈಗೊಂಡ ಕ್ರಮದ ಬಗ್ಗೆ ಮುಂದಿನ ಸಭೆಯಲ್ಲಿ ತಿಳಿಸಬೇಕೆಂದು ಕೋರುತ್ತಾ ಅಂದಿನ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

(ಹಾಜರಾಗಿರುವುದಿಲ್ಲ)
ಕಾರ್ಯದರ್ಶಿಗಳು ವಾರ್ಡ್ ಸಮಿತಿ
ವಾರ್ಡ್ ಸಂಖ್ಯೆ-129

ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ-129

ಪ್ರತಿಯನ್ನು:-

1. ಆಪ್ತ ಸಹಾಯಕರು, ಮಾನ್ಯ ವಿಶೇಷ ಆಯುಕ್ತರು ಆಡಳಿತರವರಿಗೆ ಕಳುಹಿಸುತ್ತಾ, ಸದರಿ ಸಭೆಯ ನಡವಳಿಗಳನ್ನು ಮಾನ್ಯ ವಿಶೇಷ ಆಯುಕ್ತರು ಆಡಳಿತರವರ ಅವಗಾಹನೆಗೆ ತರಲುಕೋರಿದೆ.
2. ಜಂಟಿಆಯುಕ್ತರು ರಾ.ರಾ.ನಗರ ವಲಯರವರ ಮಾಹಿತಿಗಾಗಿ
3. ಮುಖ್ಯಅಭಿಯಂತರು ರಾ.ರಾ.ನಗರ ವಲಯರವರ ಮಾಹಿತಿಗಾಗಿ
4. ಕಾರ್ಯಪಾಲಕಅಭಿಯಂತರರು ರಾ.ರಾ.ನಗರ ವಿಭಾಗರವರ ಮಾಹಿತಿಗಾಗಿ.
5. ಸಭೆಯಲ್ಲಿ ಹಾಜರಿದ್ದ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ
6. ವಾರ್ಡ್ ಸಮಿತಿ ಸದಸ್ಯರುಗಳಿಗೆ.